ಮನೆಯೊಳಗೆ ಹೋದ. ತುಸು ಕಾದು, ನಾನು ಹಿಂಬಾಗಿಲಿನಿಂದ ಮನೆಯೊಳಗೆ ಹೋದೆ. ಹಜಾರದಲ್ಲಿ ಆತ ಮೇಡಂರನ್ನು ತಬ್ಬಿಕೊಂಡು ಮುದ್ದಿಸುತ್ತಿದ್ದ. ನನ್ನನ್ನು ಕಂಡು ಆತನಿಗೆ ಗಾಬರಿಯಾಯಿತು. ನಾನು ಅವನನ್ನು ಹಿಡಿಯಲು ಯತ್ನಿಸಿದೆ. ಆತ ತಪ್ಪಿಸಿಕೊಂಡ. ಮೇಡಂ ಗದರಿಸುತ್ತಾ, ನನಗೆ ಹೊಡೆಯಲು ಬಂದರು. ಸಾಬು ಅಲ್ಲೇ ಟೀಪಾಯಿಯ ಮೇಲಿದ್ದ ಇಟ್ಟಿಗೆಯೊಂದನ್ನು ನನ್ನತ್ತ ಎಸೆದ. ಅದು ಗುರಿ ತಪ್ಪಿ ಮೇಡಂರ ತಲೆಯ ಹಿಂಭಾಗಕ್ಕೆ ಹೊಡೆಯಿತು. ಅವರು ಹೊಗೆಗೂಡಿನ ಮೇಲೆ ಬಿದ್ದರು. ಅವನನ್ನು ಹಿಡಿಯಲು ಯತ್ನಿಸುವಾಗ, ಆತ ನುಣುಚಿಕೊಂಡ. ನಾನು ಬೆನ್ನಟ್ಟಿದೆ. ಆತ ಗೇಟು ದಾಟುವಾಗ, ಸಾಹೇಬರು ಬಂದರು. ಆತ ಅವರನ್ನು ತಳ್ಳಿ, ಬೈಕಿನಲ್ಲಿ ಪರಾರಿಯಾದ. ಈ ಗಡಿಬಿಡಿಯಲ್ಲಿ ಮೇಡಂರನ್ನು ಮರೆತೇ ಬಿಟ್ಟಿದ್ದೆ. ಒಳ ಬಂದು ನೋಡುವಾಗ ಮೇಡಂರ ಮೈಕೈ, ಮುಖವೆಲ್ಲಾ ಸುಟ್ಟಿತ್ತು!"

"ಮೇಡಂ ಬೆಂಕಿಯ ಮೇಲೆ ಬಿದ್ದರೂ, ಯಾಕೆ ಮಿಸುಕಾಡಲೇ ಇಲ್ಲ?"

"ಬಹುಶಃ ಅವರ ಪ್ರಜ್ಞೆ ತಪ್ಪಿರಬೇಕು. ಚೆಟ್ಟಿಯಪ್ಪನವರಿಗೆ ನಡೆದಿದ್ದುದನ್ನು ಹೇಳಿದೆ. ಆಕೆ ಆಕಸ್ಮಿಕವಾಗಿ ಬೆಂಕಿಗೆ ಬಿದ್ದುದರಿಂದ, ಈ ವಿಷಯ ಯಾರಿಗೂ ಹೇಳುವುದು ಬೇಡವೆಂದರು. ಅನಂತರ ಆಂಬುಲೆನ್ಸಿಗೆ ಫೋನು ಮಾಡಿದೆವು."

"ಆಕೆಯ ತಲೆಗೆ ಏಟು ಬಿದ್ದಿದ್ದು ಪೊಲೀಸರಿಗೆ ಗೊತ್ತಾದಾಗ, ಚೆಟ್ಟಿಯಪ್ಪ ಏಕೆ ನಡೆದುದನ್ನು ಹೇಳಲಿಲ್ಲ?"

"ಅದು ನನಗೆ ತಿಳಿದಿಲ್ಲ. ಬಾಯಿ ಬಿಡಬಾರದೆಂದು ಅವರು ನನಗೆ ಖಡಕ್ಕಾಗಿ ಹೇಳಿದ್ದರು. ತಪ್ಪನ್ನು ತಮ್ಮ ಮೇಲೇ ಹೊರಿಸಿಕೊಂಡರು."

"ನೀನು ಆ ಇಟ್ಟಿಗೆಯನ್ನು ಎತ್ತಿಟ್ಟು ಸಾಬುವಿಂದ ಹಣ ಕೀಳತೊಡಗಿದೆಯಲ್ವೇ?"

"ಹೌದು."

"ಇದು ನಿನ್ನ ಹೇಳಿಕೆ. ಈ ಬಗ್ಗೆ ಸಾಬು ಏನು ಹೇಳುತ್ತಾನೆ? ಅವನಿಗೆ ಬರಲು ಹೇಳಿದ್ದೆ."

ಅಷ್ಟರಲ್ಲಿ ಕರಮಚಂದನ ಚರವಾಣಿ ರಿಂಗಣಿಸಿತು. ಕರೆ ಸ್ವೀಕರಿಸಿದವನೇ ಉದ್ಗಾರ ಹೊರಡಿಸಿದ,

"ಏನು? ಕಾಶಿ ಆತ್ಮಹತ್ಯೆ ಮಾಡಿಕೊಂಡರೆ? ನಮ್ಮಿಂದ ಸಣ್ಣ ತಪ್ಪಾಯ್ತು. ಛೇ... ನಾವೀಗಲೇ ಬರುತ್ತೇವೆ."

ನಾವು ತಕ್ಷಣ, ಈರಪ್ಪನನ್ನು ಕರೆದುಕೊಂಡು ಕಾಶಿಯವರ ಮನೆಯತ್ತ ಹೊರಟೆವು. ನನಗಂತೂ ಒಟ್ಟೂ ಗೊಂದಲ. ಕಾಶಿ ಆತ್ಮಹತ್ಯೆ ಮಾಡಿಕೊಂಡಿದ್ದೇಕೆ? ನಮ್ಮಿಂದ ಆದ ತಪ್ಪೇನು?

"ಕಾಶಿಯವರು ತನಿಖೆಗೆ ಹೇಳಿದೊಡನೆಯೇ ಆಗಂತುಕ ಚೆಟ್ಟಿಯಪ್ಪನ ಮನೆಗೆ ಬಂದುದರಿಂದ, ಆತನಿಗೂ ಕಾಶಿಗೂ ಸಂಬಂಧವಿದೆಯೆಂದು ಭಾವಿಸಿದೆ. ಈರಪ್ಪ ಸಾಬುವಿನ ಹೆಸರು ಹೇಳಿದ. ಕಾಶಿಯ ಕುಟುಂಬದ ಬಗ್ಗೆ ವಿಚಾರಿಸಿದಾಗ, ಅವರ ಪತ್ನಿ ಕ್ರಿಶ್ಚಿಯನ್ ಹಾಗೂ ಮಗನೇ ಸಾಬು ಅನ್ನುವುದು ಗೊತ್ತಾಯಿತು! ತನ್ನ ಮಗ ಕೊಲೆ ಮಾಡಿರಬೇಕೆಂದು ಭಾವಿಸಿ, ಕಾಶಿ ಆತ್ಮಹತ್ಯೆ ಮಾಡಿಕೊಂಡರು. ಅವರಿಗೆ ವಿಷಯ ತಿಳಿಸುವುದು ತಡವಾಗಿ ಅನಾಹುತವಾಯಿತು." ಕರಮಚಂದ ವಿವರಿಸಿದ.

ತುಸು ಹೊತ್ತಿನಲ್ಲಿ ನಾವು ಕಾಶಿಯವರ ಮನೆ ತಲಪಿದೆವು. ತಂದೆ ಸತ್ತ ದುಃಖದ ನಡುವೆಯೂ ಸಾಬು ತನಿಖೆಗೆ ಸಹಕರಿಸಿದ.

"ನಾನು ಎರಡು ಗಂಟೆಗೆ ಮನೆಗೆ ಬಂದೆ. ಮಿಥಿಲಾ ಕಾಯುತ್ತಿದ್ದಳು. ನಾವು ಸಲ್ಲಾಪದಲ್ಲಿರುವಾಗ, ಹಿಂಬಾಗಿಲಿನಿಂದ ಈರಪ್ಪ ಒಳಬಂದ. ಗಾಬರಿಯಿಂದ ನಾನು ಬಾಗಿಲತ್ತ ಧಾವಿಸಿದೆ. ಮಿಥಿಲಾ ಇವನಿಗೆ ಗದರಿದಳು. ಈತ ನನ್ನತ್ತ ಬರುವುದು ಕಂಡು, ನಾನಲ್ಲೇ ಇದ್ದ ಇಟ್ಟಿಗೆಯನ್ನು ಆತನ ಮೇಲೆ ಎಸೆದೆ. ಅದು ಗುರಿ ತಪ್ಪಿ, ಮಿಥಿಲಾಳ ಮೇಲೆ ಬಿತ್ತು. ಆಕೆ ಕುಸಿದಳು. ಆದರೆ, ಆಕೆಗೆ ಏನಾಯಿತೆಂದು